# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 2648 |
| ವಿಧಾನ ಪರಿಷತ್ತು ಸದಸ್ಯರ ಹೆಸರು | : | ಶ್ರೀ ಪ್ರಕಾಶ ಕೆ ರಾಥೋಡ್(ನಾಮ ನಿರ್ದೇಶನ ಹೊಂದಿದವರು |
| ಉತ್ತರಿಸುವ ಸಚಿವರು | : | ತೋಟಗಾರಿಕೆ ಹಾಗೂ ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವರು |
| ಉತ್ತರಿಸಬೇಕಾದ ದಿನಾಂಕ | : | 25-03-2022 |

| ಕ್ರ. ಸಂ; | ಪ್ರಶ್ನೆ | ಉತ್ತರ |
|---|---|---|
| ಅ | ತೋಟಗಾರಿಕೆ ವಿಶ್ವ ವಿದ್ಯಾಲಯವು ವಿನೂತನ ತಂತ್ರಜ್ಞಾನ, ಹೊಸತಳಿ ಹಾಗೂ ನಿರ್ವಹಣಾ ಪದ್ಧತಿಯನ್ನು ಅಭಿವೃದ್ಧಿ ಪಡಿಸಲು ಕೈಗೊಂಡಿರುವ ಕ್ರಮಗಳೇನು; | 1. ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬಾಗಲಕೋಟದಲ್ಲಿ, ಸಂಶೋಧನೆಯು ಒಂದು ಆದ್ಯತೆಯ ವಿಷಯವಾಗಿದೆ. ಬೆಳೆ ಅಭಿವೃದ್ಧಿ, ಉತ್ಪಾದನೆ ಮತ್ತು ಸಂರಕ್ಷಣೆಗಳಲ್ಲದೇ ಕೊಯ್ಲೋತ್ತರ ತಂತ್ರಜ್ಞಾನಗಳ ಕುರಿತು ಸಂಶೋಧನ ಹಮ್ಮಿಕೊಳ್ಳಲಾಗುತ್ತಿದೆ. ವಿಶ್ವವಿದ್ಯಾಲಯದಲ್ಲಿ ಒಟ್ಟು 11 ತೋಟಗಾರಿಕಾ ಸಂಶೋಧನಾ ಕೇಂದ್ರಗಳು ಹಾಗೂ 09 ಅಖಿಲ ಭಾರತ ಸಮನ್ವಯ ಸಂಶೋಧನಾ ಯೋಜನೆಗಳು ವಿವಿಧ ಕೃಷಿ ಹವಾಮಾನ ವಲಯಗಳಲ್ಲಿ ಕಾರ್ಯ ನಿರ್ವಹಿಸುತ್ತಿವೆ.<br>2. ಈ ಕೇಂದ್ರಗಳಲ್ಲಿ ವಲಯವಾರು ರೈತರ ಸಮಸ್ಯೆಗಳಿಗೆ ಪರಿಹಾರ ನೀಡುವ ನಿಟ್ಟಿನಲ್ಲಿ ಸಂಶೋಧನೆ ಕೈಗೊಳ್ಳಲಾಗುತ್ತಿದೆ. ತೋ.ವಿ.ವಿ., ಬಾಗಲಕೋಟವು ಕರ್ನಾಟಕ ರಾಜ್ಯದ 24 ಜಿಲ್ಲೆಗಳ ವ್ಯಾಪ್ತಿಯನ್ನು ಹೊಂದಿವೆ. ತೋಟಗಾರಿಕೆ ಬೆಳೆಗಳ ಉತ್ಪಾದಕತೆ ಮತ್ತು ಗುಣಮಟ್ಟ ಹೆಚ್ಚಿಸುವಲ್ಲಿ ರೈತರು ಎದುರಿಸುವ ಸಮಸ್ಯೆಗಳಿಗೆ ಪರಿಹಾರ ನೀಡಲಾಗುತ್ತಿದೆ. ಇದಲ್ಲದೆ, ವಿವಿಧ ಸಂಸ್ಥೆಗಳ (RKVY, NHM, NHB, DBT, DST etc.)ಆರ್ಥಿಕ ಅನುದಾನವನ್ನು ಪಡೆದು ವಿವಿಧ ಸಂಶೋಧನಾ ಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಗುತ್ತಿದೆ.<br>3. ಪ್ರಸ್ತುತ ವರ್ಷ 2020-21 ರಲ್ಲಿ 3 ತಳಿಗಳ ಬಿಡುಗಡೆಗೆ ಶಿಫಾರಸ್ಸು ಮಾಡಲಾಗಿದೆ. ಒಟ್ಟು 35 ವಿವಿಧ ತಾಂತ್ರಿಕತೆಗಳನ್ನು ರೈತರಿಗೆ ಶಿಫಾರಸ್ಸು ಮಾಡಲಾಯಿತು (ತಳಿ ಅಭಿವೃದ್ಧಿ 05, ಬೆಳೆ ಉತ್ಪಾದನೆ 10, ಬೆಳೆ ಸಂರಕ್ಷಣೆ 14 ಮತ್ತು ಕೊಯ್ಲೋತ್ತರ ತಂತ್ರಜ್ಞಾನ 06) ಮುಂದುವರೆದು, 32 ಬಾಹ್ಯ ಸಂಸ್ಥೆಗಳ ಸಂಶೋಧನಾ ಅನುದಾನದ ಯೋಜನೆಗಳು, 298 ವಿಶ್ವವಿದ್ಯಾಲಯದ ಸಂಶೋಧನಾ ಯೋಜನೆಗಳು, 64 ಅಖಿಲ ಭಾರತ ಸಮನ್ವಯ ಸಂಶೋಧನಾ ಯೋಜನೆಗಳು, 38 ರೈತರ ಕ್ಷೇತ್ರ ಪ್ರಯೋಗಗಳು ಮತ್ತು 14 ವಿವಿಧ ವಲಯದ ಪ್ರಯೋಗಗಳನ್ನು ಮುಂದುವರೆಸಲಾಗಿದೆ. ಮುಂದಿನ |

| | | |
|---|---|---|
| | | ವರ್ಷಕ್ಕೆ 91 ಹೊಸ ತಾಂತ್ರಿಕತೆ ಯೋಜನೆಗಳು, 20 ಕ್ಷೇತ್ರ ಪ್ರಯೋಗಗಳು ಮತ್ತು 13 ಬಹು ಕ್ಷೇತ್ರೀಯ ಪ್ರಯೋಗಗಳನ್ನು ಚರ್ಚಿಸಿ ಹಮ್ಮಿಕೊಳ್ಳಲು ನಿರ್ಧರಿಸಲಾಗಿದೆ. |
| ಆ | ಯಾವ ಯಾವ ತೋಟಗಾರಿಕೆ ಬೆಳೆಗಳ ಹೊಸ ತಳಿಗಳನ್ನು ಪರಿಚಯಿಸಲಾಗುತ್ತಿದೆ ಹಾಗೂ ಇತರೆ ಯಾವ ಸಂಸ್ಥೆಗಳ ಸಹಯೋಗದೊಂದಿಗೆ ಮಾಡಲಾಗುತ್ತಿದೆ; (ವಿವರ ನೀಡುವುದು) | ಕಳೆದ 13 ವರ್ಷಗಳಿಂದ ವಿಶ್ವವಿದ್ಯಾಲಯವು ವಿವಿದ ಸಂಸ್ಥೆಗಳ ಸಹಯೋಗದೊಂದಿಗೆ ವಿವಿಧ ತೋಟಗಾರಿಕೆ ಬೆಳೆಗಳಲ್ಲಿ ಸಂಶೋಧನೆಯನ್ನು ಕೈಗೊಳ್ಳಲಾಗುತ್ತಿದೆ. ಈ ಸಂಸ್ಥೆಗಳ ವಿವರ ಈ ರೀತಿಯಾಗಿದೆ.<br>1. ಭಾರತೀಯ ತೋಟಗಾರಿಕಾ ಸಂಶೋಧನಾ ಸಂಸ್ಥೆ, ಬೆಂಗಳೂರು,<br>2. ತೆಂಗು ಅಭಿವೃದ್ಧಿ ಮಂಡಳಿ, ಬೆಂಗಳೂರು,<br>3. ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ, ನವದೆಹಲಿ<br>4. ಕರ್ನಾಟಕ ಕೃಷಿ ಬೆಲೆ ಅಯೋಗ, ಬೆಂಗಳೂರು,<br>5. ಕರ್ನಾಟಕ ರಾಜ್ಯ ಕೃಷಿ-ಮಾರ್ಕೆಟಿಂಗ್ ಮಂಡಳಿ,<br>6. ರಾಷ್ಟ್ರೀಯ ಜೇನು ಮಂಡಳಿ, ನವದೆಹಲಿ<br>7. ರಾಷ್ಟ್ರೀಯ ಮಿಷನ್‌ದ ಆಹಾರ ಸಂಸ್ಕರಣೆ, (NMFP)<br>8. ವಿಜ್ಞಾನ ಮತ್ತು ತಂತ್ರಜ್ಞಾನ ವಿಭಾಗ (SERB / DST)<br>9. ರಾಷ್ಟ್ರೀಯ ತೋಟಗಾರಿಕಾ ಮಿಷನ್, ಸಿಎಸ್‌ಎಸ್ ಎಂ.ಐ.ಡಿ.ಎಚ್. (CSS-MIDH)<br>10. ಭಾ.ಕೃ.ಅ.ಪ-ಕೇಂದ್ರೀಯ ನೆಡುತೋಪು ಬೆಳೆಗಳ ಸಂಶೋಧನಾ ಕೇಂದ್ರ, (ಸಿ.ಪಿ.ಸಿ.ಆರ್.ಐ. ಕಾಸರಗೋಡ<br>11. ಭಾ.ಕೃ.ಅ.ಪ - ರಾಷ್ಟ್ರೀಯ ಸಂಶೋಧನಾ ಕೇಂದ್ರ, (ಎನ್ ಅರ್.ಸಿ.) ದ್ರಾಕ್ಷಿ, ಪುಣೆ<br>12. ಭಾ.ಕೃ.ಅ.ಪ - ರಾಷ್ಟ್ರೀಯ ಸಂಶೋಧನಾ ಕೇಂದ್ರ, (ಎನ್ ಅರ್.ಸಿ.) ಬಾಳೆ, ಟ್ರೇಚಿ<br>13. ಭಾ.ಕೃ.ಅ.ಪ - ರಾಷ್ಟ್ರೀಯ ತೋಟಗಾರಿಕಾ ಸಂಶೋಧನೆ ಮತ್ತು ಅಭಿವೃದ್ಧಿ ಪ್ರತಿಷ್ಠಾನ (ಎನ್ ಅರ್. ಎಚ್.ಆರ್.ಡಿ.ಎಫ್), ನಾಸಿಕ್<br>14. ಭಾ.ಕೃ.ಅ.ಪ - ರಾಷ್ಟ್ರೀಯ ಸಂಶೋಧನಾ ಕೇಂದ್ರ (ಎನ್.ಅರ್.ಸಿ.) ಈರುಳ್ಳಿ ಮತ್ತು ಬೆಳ್ಳುಳ್ಳಿ), ನಾಸಿಕ್<br>15) ಕೃಷಿ ವಿಶ್ವವಿದ್ಯಾಲಯ, ದಾರವಾಡ<br><br>ಈ ಸಂಸ್ಥೆಗಳು ಹಾಗೂ ರಾಜ್ಯದ ವಿವಿಧ ಕೃಷಿ ವಿಶ್ವವಿದ್ಯಾಲಯಗಳ ಸಹಯೋಗದೊಂದಿಗೆ ಸಂಶೋಧನೆ ಕೈಗೊಂಡು 2009 ರಿಂದ 2021 ವರಗೆ ಒಟ್ಟು 35 ತೋಟಗಾರಿಕೆ ಬೆಳೆಗಳ ಹೊಸ ತಳಿಗಳನ್ನು ಅಭಿವೃದ್ಧಿಪಡಿಸಿದೆ. ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯದಿಂದ ಬಿಡುಗಡೆಯಾದ ತಳಿಗಳ ಪಟ್ಟಿ ಈ ರೀತಿಯಾಗಿದೆ.<br>1. ನುಗ್ಗೆ - ಭಾಗ್ಯ (KDM-01)<br>2. ಮೆಣಸಿನಕಾಯಿ- GCS /94-68<br>3. ದೊಣ್ಣೆ ಮೆಣಸಿನಕಾಯಿ- ಅಪೂರ್ವ (CP-40) |

| | | |
|---|---|---|
| | | 4. ಸೇವಂತಿಗೆ – ದುಂಡಿ<br>5. ತೆಂಗು- ಕಲ್ಪತರು<br>6. ತೆಂಗು- ಕಲ್ಪಜ್ಯೋತಿ<br>7. ತೆಂಗು ಸಂಕರಣ ತಳಿ ಕಲ್ಪ ಗಂಗಾ (GBGD X FJT)<br>8. ತೆಂಗು ಸಂಕರಣ ತಳಿ ಅನಂತ ಗಂಗಾ (GBGD X LCOT)<br>9. ತೆಂಗು ಸಂಕರಣ ತಳಿ ವಶಿಷ್ಠ ಗಂಗಾ (GBGD X PHOT)<br>10. ತೆಂಗು ಸಂಕರಣ ತಳಿ ಕಲ್ಪ ಶ್ರೇಷ್ಠ (MYD X TPT)<br>11. ಕರಿಮೆಣಸು – ಅಡಿಮನೆ<br>12. ಅಡಿಕೆ A-1/266<br>13. ಅಡಿಕೆ A-1/447<br>14. ಚಿಕ್ಕು - DHS-2/1<br>15. ಬೆಳ್ಳುಳ್ಳಿ- AAS-2/1<br>16. ಧನಿಯಾ: DCC – 46<br>17. ಧನಿಯಾ: ವರದೇವಿ (DCC-81)<br>18. ಧನಿಯಾ: DWD-3<br>19. ಚೈನಾ ಆಸ್ಟರ್ AAC-1<br>20. ಮೆಂತೆ- DFC – 21<br>21. ಹುಣಸೆ : ATS 1<br>22. ಹಲಸು : ಮಹಾರಾಜ<br>23. ಮೆಣಸಿನಕಾಯಿ: ಶುಕಾ SRS-2<br>24. ಮೆಣಸಿನಕಾಯಿ GPM-120-S-1<br>25. ಮೆಣಸಿನಕಾಯಿ: ರುದ್ರ (GPM-120-S-1)<br>26. ಮೆಣಸಿನಕಾಯಿ ಸಂಕರಣ ತಳಿ-80<br>27. ಆಲೂಗಡ್ಡೆ-ಕುಫ್ರಿ ಚಿಪ್ಸೋನಾ<br>28. ಟೊಮ್ಯಾಟೊ-ಶಾಂತಾ RFT-S-1 (DTS-1)<br>29. ಸಾಂಬಾರ ಸೌತೆ-ಕೃಷ್ಣಪ್ರಭ (ಶಿರಸಿ ಲೋಕಲ್)<br>30. ಚವಳಿ ಕಾಯಿ: ಕೃಷ್ಣಪ್ರಭ ಸಂಗಮ (COHBCBC-35-S2)<br>31. ಸಾಂಬಾರು ಈರುಳ್ಳಿ: ಕೃಷ್ಣಪ್ರಭ ಚಿತ್ರಾವತಿ (COHBCBC-35-S2)<br>32. ಸೋಯಾ ಅವರೆ: ಕೃಷ್ಣಪ್ರಭ ಪಿನಾಕಿನಿ (COHBSBM-26)<br>33. ಟೊಮ್ಯಾಟೊ: ಕೃಷ್ಣಪ್ರಭ ಶಲ್ಮಲ (MABC-1)<br>34. ಟೊಮ್ಯಾಟೊ: ಕೃಷ್ಣಪ್ರಭ ತುಂಗ (MABC-3)<br>35. ಟೊಮ್ಯಾಟೊ: ಕೃಷ್ಣಪ್ರಭ ಬಾರಿ (MABC 5 ) |
| ಇ | ಹೊಸ ತಳಿಗಳನ್ನು ರೈತರಿಗೆ ನೀಡಲು ಸರ್ಕಾರವು ಯಾವ ಕ್ರಮ ಕೈಗೊಂಡಿದೆ? | ವಿಶ್ವವಿದ್ಯಾಲಯವು ವಿವಿಧ ತೋಟಗಾರಿಕೆ ಬೆಳೆಗಳ ಬೀಜ ಮತ್ತು ಸಸಿಗಳ ಉತ್ಪಾದನಾಯನ್ನು ಕೈಗಳ್ಳುತ್ತಿದೆ. ಬೋಧನೆ, ಸಂಶೋಧನೆ ಮತ್ತು ವಿಸ್ತರಣಾ ಚಟುವಟಿಕೆಗಳ ಜೊತೆಗೆ, ವಿಶ್ವವಿದ್ಯಾಲಯವು ಅಗತ್ಯವಿರುವ ರೈತರಿಗೆ ವಿವಿಧ ತೋಟಗಾರಿಕಾ ಬೆಳೆಗಳ ಬೀಜಗಳು ಹಾಗೂ ಸಸಿಗಳನ್ನು ಪೂರೈಸಲು ಸಹ ಸೇವೆ ಸಲ್ಲಿಸುತ್ತದೆ. ಪ್ರತಿ ವರ್ಷ 10-15 ಸಾವಿರ ಕೆಜಿ ವಿವಿಧ |

| | | |
|---|---|---|
| | | ಬೆಳೆಗಳ ಬೀಜಗಳು ಮತ್ತು 2-3 ಲಕ್ಷ ವಿವಿಧ ತೋಟಗಾರಿಕೆ ಬೆಳೆಗಳ ಉತ್ತಮ ಗುಣಮಟ್ಟದ ಕಾಂಡದ ತುಂಡುಗಳು, ಗೂಟಿ ಸಸಿಗಳು, ಅಂಗಾಂಶ ಕೃಷಿ ಸಸಿಗಳನ್ನು ಅಭಿವೃದ್ಧಿಪಡಿಸಿ ರೈತರಿಗೆ ವಿತರಿಸಲಾಗುತ್ತಿದೆ. |

**HORTI 234 HGM 2022**

(ಮುನಿರತ್ನ)
ತೋಟಗಾರಿಕೆ ಹಾಗೂ ಯೋಜನೆ, ಕಾರ್ಯಕ್ರಮ
ಸಂಯೋಜನೆ ಮತ್ತು ಸಾಂಖ್ಯಿಕ ಸಚಿವರು